(ಊ) ವಿಷಯ: ಶಿವಮೊಗ್ಗದಲ್ಲಿ ಗೌರವಾನ್ವಿತ ನಾಗರೀಕರನ್ನು ಬಂಧನದಲ್ಲಿ ಇಟ್ಟ ವಿಷಯದ ಬಗ್ಗೆ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಉಪಾಧ್ಯಕ್ಷರೆ, ಕಳೆದ ಬಾರಿ ಶಿವಮೊಗ್ಗ ನಗರದಲ್ಲಿ ಒಬ್ಬ ಗೌರವಾನ್ವಿತ ನಾಗರೀಕರನ್ನು ಶುಕ್ರವಾರ ಸಂಜೆ ಬಂಧನ ಮಾಡಿ, ಅವರನ್ನು ಎರಡು ದಿನ ಜೈಲಿನಲ್ಲಿಟ್ಟು ಇದಕ್ಕೆ ಕಾರಣರಾದಂತಹವರ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾವ ಮಾಡಿದ್ದೆ. ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಇದಕ್ಕೆ ಏನು ಉತ್ತರ ಕೊಡುತ್ತಾರೆ? ಅದರಲ್ಲಿ ಸಂಬಂಧಪಟ್ಟ ಸಬ್‌ಇನ್ಸ್‌ಪೆಕ್ಟರ್ ಅನ್ನು ಸಸ್ಪೆಂಡ್ ಮಾಡಿದ್ದಾರೆಯೇ? ಏಕೆಂದರೆ ಈಗಾಗಲೆ ಚೇಂಬರ್ ಆಫ್ ಕಾಮರ್ಸ್‌ನವರು, ಈ ರೀತಿಯಾಗಿ ಗೌರವಾನ್ವಿತ ವ್ಯಾಪಾರಸ್ಥರನ್ನು ವಿನಾಕಾರಣ ಬಂಧನದಲ್ಲಿ ಇಟ್ಟಿದ್ದಂತಹ ಕಾರಣಕ್ಕೆ ಶಿವಮೊಗ್ಗ ಜಿಲ್ಲೆ ಬಂದ್‌ಗೆ ಕಾಲ್ ಕೊಡುತ್ತೇವೆನ್ನುವಂತಹ ಮಾತನ್ನು ಹೇಳುತ್ತಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಇವತ್ತು ಅಶಾಂತಿಯ ವಾತಾವರಣ ನಿರ್ಮಾಣವಾಗುವುದಕ್ಕೆ ಈ ಸರ್ಕಾರವೇ ಕಾರಣವಾಗುತ್ತದೆ. ಹಾಗಾಗಿ 292 ಸಎಕ್ಷನ್ ಹಾಕಿ ಜಾಮೀನನ್ನು ಕೊಡಬೇಕಾದಂತಹ ಸಬ್‌ಇನ್ಸ್‌ಪೆಕ್ಟರ್ ಅವರನ್ನು ಜೈಲಿಗೆ ಕಳಿಸಿದ್ದಾರೆ. ಹೀಗಾಗಿ ಸರ್ಕಾರ ಆ ಸಬ್‌ಇನ್ಸ್‌ರ್ ಬಗ್ಗೆ ಕ್ರಮ ತೆಗೆದುಕೊಂಡು, ಅವರನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟು, ಅದನ್ನು ಎನ್‌ಕ್ವೈರಿ ಮಾಡುತ್ತಾರೆಯೇ ಎನ್ನುವುದನ್ನು ಈ ಸದನದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಈ ವಿಚಾರವನ್ನು ಮಾನ್ಯ ಹಿರಿಯ ಶಾಸಕರು ಸದನದಲ್ಲಿ ಪ್ರಸ್ತಾಪ ಮಾಡಿದರು. ಆಗ ಸರ್ಕಾರದ ಪರವಾಗಿ ಉತ್ತರವನ್ನು ಕೂಡ ಕೊಟ್ಟರು. ಆ ಭಿತ್ತಿಚಿತ್ರ, ಅಶ್ಲೀಲ ಚಿತ್ರವನ್ನು ಪ್ರದರ್ಶನ ಮಾಡಿರತಕ್ಕಂಥ ವಿಚಾರದಲ್ಲಿ ಇಲಾಖಾ ವರದಿ ಬಂದಿರುವುದರಲ್ಲೆ, ಅಲ್ಲಿಯೇ ಇರುವಂತಹ ಕೆಲವು ಮಹಿಳಾ ಸಂಘಟನೆಗಳು, ನೀವು ಮಾಡಿದಂತಹ ಕ್ರಮ ಸರಿಯಾಗಿದೆಯಾ ಎನ್ನುವ ವಿಷಯದಲ್ಲಿ ಅವರಿಗೆ ಹೇಳಿದರು, ಆ ಕಾರಣಕ್ಕಾಗಿ ಕ್ರಮ ತೆಗೆದುಕೊಂಡಿದ್ದೇನೆ ಎಂದು ಹೇಳಿದರು. ಎಲ್ಲಾ ಹಿರಿಯ ಮಾನ್ಯ ಶಾಸಕರುಗಳು ಪ್ರಸ್ತಾಪ ಮಾಡಿದೆ ಮೇಲೆ ಅದರ ಬಗ್ಗೆ ಹೆಚ್ಚಿನ ವಿಚಾರಣೆಯನ್ನು ಮಾಡುವಂತಹ ಅಗತ್ಯ ಇದೆ. ಅದು ಚಿಕ್ಕದಾಗಿರುವಂತಹ, ಕಾಂಪೌಂಡೇಬಲ್ ಆಗಿರತಕ್ಕಂಥ ಅವರೇ ಜಾಮೀನನ್ನು ಕೊಡಬೇಕಾದಂತಹ ಒಂದು ಪ್ರಕರಣದಲ್ಲಿ ಎರಡು ದಿವಸದವರೆಗೂ ಕೂಡ ಅನಾವಶ್ಯಕವಾಗಿ ಬಂಧನದಲ್ಲಿ ಇಡಬೇಕಾಗಿರುವಂತಹ ಪ್ರಮೇಯ ಉಂಟಾಗಿರುವುದು ಯಾವುದು ಎನ್ನುವ ವಿಚಾರದಲ್ಲಿ ಈಗಾಗಲೆ ನಾವು ಸರ್ಕಾರದಿಂದ ಪತ್ರವನ್ನು ಕಳುಹಿಸಿಕೊಟ್ಟಿದ್ದೇವೆ. ಯಾಬ ಸಬ್ ಇನ್ಸ್‌ಪೆಕ್ಟರ್ ಅನ್ನೂ ಕೂಡ ನಾವು ಇನ್ನೂ ಅಮಾನತ್ತಿನಲ್ಲಿ ಇಟ್ಟಿಲ್ಲ. ಬೆಳಿಗ್ಗೆ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳ ಜೊತೆ ಈ ವಿಚಾರವನ್ನು ಮಾತನಾಡಿ ತಮಗೆ ಮಾಹಿತಿಯನ್ನು ತರಿಸಿಕೊಡುತ್ತೇನೆಂದು ನಾನು

ಹೇಳಿದ್ದೇನೆ. ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ಈ ವಿಚಾರವನ್ನು ತಂದಿದ್ದೇವೆ. ನಾನು ಈ ದಿವಸವೇ ಮಾತನಾಡಿ ಸರಿಯಾದ ಉತ್ತರವನ್ನು ಅವರಿಗೆ ಒದಗಿಸಿಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಇವತ್ತು ಕೊಡುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್: ಇವತ್ತು ಅಥವಾ ನಾಳೆ ಕೊಡಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಅಲ್ಲ, ಒಂದು ವಾರವಾಯಿತು, ಅದಕ್ಕೇ ನಾನು ಹೇಳುತ್ತಿರುವುದು. ಶಿವಮೊಗ್ಗ ಜಿಲ್ಲೆಯಲ್ಲಿ ಅಶಾಂತಿಯ ವಾತಾವರಣ ಉಂಟಾಗಬಾರದು. ಇವತ್ತೇ ಅದರ ಬಗ್ಗೆ, ಸಬ್ ಇನ್ಸ್‌ಪೆಕ್ಟರ್.....

ಶ್ರೀ ಎಂ.ಪಿ. ಪ್ರಕಾಶ್: ಈಗ ಇನ್ನೊಂದು ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಆದುದರಿಂದ ಅವರ ಗಮನಕ್ಕೆ ತಂದು, ಅದರ ಬಗ್ಗೆ ಅಲ್ಲಿಂದ ವರದಿ ತರಿಸಿಕೊಂಡು ತಮಗೆ ಉತ್ತರವನ್ನು ಕೊಡುತ್ತೇವೆ.

(ಋ) ವಿಷಯ: ಸಹಕಾರಿ ಬ್ಯಾಂಕ್‌ಗಳಲ್ಲಿ ನಾಮಪತ್ರಗಳನ್ನು ತಿರಸ್ಕರಿಸಿರುವುದರ ಬಗ್ಗೆ

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಉಪಾಧ್ಯಕ್ಷರೆ, ಉಡುಪಿಯ ಬೇರೆ ಬೇರೆ ಭಾಗದಿಂದ ಕೂಡ ನಮಗೆ ಈ ಘಟನೆ ಬಗ್ಗೆ ಸ್ವಲ್ಪ ಮಾಹಿತಿ ಬಂದಿದೆ. ಇದು ಪತ್ರಿಕೆಯಲ್ಲಿ ಕೂಡ ಬಂದಿದೆ. ಅದು 'ಸಹಕಾರಿ ಟ್ಯಾಂಕ್‌ನಲ್ಲಿ ನಾಮ ಪತ್ರ ತಿರಸ್ಕೃತ' ಎಂದು. ನಮ್ಮಲ್ಲಿ ಒಂದು ವಿಶೇಷವಾದಂತಹ ವ್ಯವಸ್ಥೆ ಇದೆ. ಕೆಲವು ಗುಂಪುಗಳಿಂದಾಗಿ ಸಹಕಾರಿ ಕ್ಷೇತ್ರದಲ್ಲಿ ಸಹಕಾರಿ ಚಳುವಳಿ ಬದಲಿಗೆ ಅಸಹಕಾರ ಚಳುವಳಿಯಾಗುತ್ತಿದೆ. ಸರ್ಕಾರಿ ಚಳುವಳಿ ಏನೋ ಎಂದು ಹೇಳಬಹುದು ಆ ಪರಿಸ್ಥಿತಿ ಬಂದು ಮುಟ್ಟಿದೆ. ಏನಾಗಿದೆ ಎಂದರೆ ಒಂದು ಗುಂಪಿನವರು, ಅವರೇ ಆ ಬ್ಯಾಂಕಿನ ವ್ಯವಸ್ಥೆಯನ್ನು ನಡೆಸಿಕೊಂಡು ಹೋಗಬೇಕೆನ್ನುವ ಉದ್ದೇಶದಿಂದ ಬೇರೆ ಯಾರ ನಾಮಪತ್ರವನ್ನು ಸಲ್ಲಿಸಿದರೂ ಅದನ್ನು ತಿರಸ್ಕಾರ ಮಾಡಿಸುವಂಥಾದ್ದು. ಮೊನ್ನೆ ನಾನು ಊರಿನಲ್ಲಿ ಇದ್ದಂತಹ ದಿವಸ ನನ್ನನ್ನು ಒಂದು ಕಡೆ ಕರೆದು ಹೇಳಿದಾಗ, ಎಂಟು ನಾಮಪತ್ರಗಳಲ್ಲಿ ಆರು ನಾಮಪತ್ರಗಳು ನಾನು ಹೋಗುವಾಗ ತಿರಸ್ಕೃತವಾಗಿದ್ದವು. ನಾನು ಚುನಾವಣಾ ಅಧಿಕಾರಿಗಳ ಹತ್ತಿರ ಹೋಗಿ "ನಾನು ಶಾಸಕನಾಗಿ ಇಲ್ಲಿಗೆ ಬಂದಿಲ್ಲ, ಒಬ್ಬ ವಕೀಲನಾಗಿ ಇಲ್ಲಿಗೆ ಬಂದು ಕೇಳುತ್ತಿದ್ದೇನೆ" ಎಂದು ಹೇಳಿದೆ. ಅಲ್ಲಿ ಏನು ಮಾಡಿದ್ದಾರೆ ಎಂದರೆ ನಾಮಪತ್ರವನ್ನು ಸಹಿ ಹಾಕಿ ಸಲ್ಲಿಸಿದಂತಹ ಅಭ್ಯರ್ಥಿ ಅಲ್ಲಿದ್ದಾರೆ. ಅದನ್ನು ಅನುಮೋದನೆ ಮಾಡಿರುವವರೂ ಕೂಡ ಅಲ್ಲಿದ್ದಾರೆ. ಅವರು ತಮ್ಮದೆ ಸಿಗ್ನೇಚರ್ ಎಂದು ಹೇಳಿದರೂ ಕೂಡ ಇದು ನಿಮ್ಮ ಸಿಗ್ನೇಚರ್‌ಗೆ ಟ್ಯಾಲಿ ಆಗುವುದಿಲ್ಲವೆಂದು ಹೇಳಿ ರಿಜೆಕ್ಟ್ ಮಾಡಿದ್ದಾರೆ. ಅಲ್ಲಿ ಚುನಾವಣಾಧಿಕಾರಿಗೆ ಅಭ್ಯರ್ಥಿ ಎದುರುಗಡೆ ನಿಂತುಕೊಂಡು ಹೇಳಿದರೂ ಸಹ ನಿನ್ನ ಸಿಗ್ನೇಚರ್ ಟ್ಯಾಲಿ ಆಗುವುದಿಲ್ಲವೆಂದು ಹೇಳಿ ಅದೇ ರೀತಿ ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ. ನಿಮ್ಮ ಸಹಿ ಅದಕ್ಕೆ ಟ್ಯಾಲಿ ಆಗುವುದಿಲ್ಲವೆಂದು ಹೇಳಿ ರಿಜೆಕ್ಟ್ ಮಾಡಿ ಕಳಿಸಿದ್ದಾರೆ. ಮತ್ತೊಂದು, ಒಬ್ಬ ಅಭ್ಯರ್ಥಿ ನಾಮಪತ್ರವನ್ನು ಸಲ್ಲಿಸಿದರೆ ಅದೇ ಪ್ರಪೋಸರ್ ಹತ್ತಿರ ಇನ್ನೊಬ್ಬರಿಗೆ ಸಿಗ್ನೇಚರ್ ತೆಗೆದುಕೊಳ್ಳುವುದು. ಯಾವಾಗಲೂ ಪ್ರಥಮ